

ಒಂದು ಊರಲ್ಲಿ ಒಬ್ಬ ಅಂಬಿಗನಿದ್ದನು. ಒಂದು ದಡದಿಂದ ಇನ್ನೊಂದು ದಡಕ್ಕೆ ಜನರನ್ನು ಕೊಂಡೊಯ್ಯಲು ಅವನ ದೋಣಿಯೇ ಏಕೈಕ ಮಾರ್ಗವಾಗಿತ್ತು. ಅಂಬಿಗನು ಪ್ರತಿ ಪ್ರಯಾಣಕ್ಕೂ ಒಂದು ರೂಪಾಯಿ ಪಡೆಯುತ್ತಿದ್ದನು. ಆ ಕಾಲದಲ್ಲಿ ಒಂದು ರೂಪಾಯಿ ಎಂದರೆ ದೊಡ್ಡ ಹಣ. ಜನರು ಅದನ್ನು ಪಾವತಿಸುವಾಗ ಅಸಮಾಧಾನದಿಂದ ಅವನನ್ನು ಬೈಯುತ್ತಿದ್ದರು.

“ಇಷ್ಟೊಂದು ಹಣ ಕೇಳುವವನಿಗೆ ಒಳ್ಳೆಯದು ಆಗುವುದಿಲ್ಲ! ಇವನು ಸತ್ತ ಮೇಲೆ ನರಕವೇ ಗತಿ! ಎಂತಹ ಲೋಭಿ” ಎಂದು ನಿಂದಿಸುತ್ತಿದ್ದರು.

ಆದರೂ ಅವರಿಗೆ ಬೇರೆ ಮಾರ್ಗವಿರಲಿಲ್ಲ. ನದಿಯನ್ನು ದಾಟಲು ಅವನ ದೋಣಿಯೇ ಏಕೈಕ ಆಶ್ರಯ. ಕಾಲಕ್ರಮೇಣ ಅಂಬಿಗನು ವೃದ್ಧನಾದನು. ಒಂದು ದಿನ ಅಸ್ವಸ್ಥನಾಗಿ ಹಾಸಿಗೆ ಹಿಡಿದನು. ತನ್ನ ಅಂತ್ಯ ಸಮೀಪಿಸಿದೆ ಎಂದು ಅರಿತ ಅವನು ಮಗನನ್ನು ಕರೆದು “ಮಗಾ, ನಾನು ಇನ್ನೂ ಹೆಚ್ಚು ದಿನ ಬದುಕುವುದಿಲ್ಲ. ಜೀವನಪೂರ್ತಿ ನಿಮಗಾಗಿ ದುಡಿಯುತ್ತಾ, ಜನರ ಬೈಗುಳಗಳನ್ನು ಸಹಿಸಿಕೊಂಡು ಬದುಕಿದ್ದೇನೆ. ಆದರೆ ನಾನು ಸತ್ತ ನಂತರ ಜನರು ನನ್ನ ಬಗ್ಗೆ ಒಳ್ಳೆಯ ಮಾತನಾಡುವಂತೆ ನೀನು ಮಾಡಬೇಕು.”

ಮಗನು ಮೌನವಾಗಿ ತಲೆಯಾಡಿಸಿದನು. ತಂದೆಯ ಮುಖದಲ್ಲಿ ಒಂದು ಶಾಂತ ನಗು ಮೂಡಿತು. ಆ ನಗುವಿನಲ್ಲೇ ಅವನು ಪ್ರಾಣ ತ್ಯಜಿಸಿದನು.

ಮರುದಿನ ಮಗ ದೋಣಿ ಹಾಯಿಸುವ ಕೆಲಸಕ್ಕೆ ಹೋದನು. ಬಂದವರಿಗೆಲ್ಲಾ “ಎಲ್ಲರೂ ಕೇಳಿ,ಇವತ್ತಿನಿಂದ ನಾನು ಅಂಬಿಗ. ನನ್ನ ದೋಣಿಯಲ್ಲಿ ಇನ್ನೊಂದು ತೀರಕ್ಕೆ ಹೋಗಲು ಎರಡು ರೂಪಾಯಿ ಕಡ್ಡಾಯವಾಗಿ ಕೊಡಬೇಕು.” ಎಂದು ಘೋಷಣೆ ಮಾಡಿದ ಇದನ್ನು ಕೇಳಿದ ಜನರು ಬೆಚ್ಚಿಬಿದ್ದರು. ಹತಾಶೆ, ಅಸಹಾಯಕತೆಯಿಂದ ಹೇಳಿದರು: “ಅಯ್ಯೋ! ನಿನ್ನ ತಂದೆ ಒಂದು ರೂಪಾಯಿಗೇ ನಮಗೆ ದಾಟಿಸುತ್ತಿದ್ದ. ಅವನು ಎಷ್ಟು ಒಳ್ಳೆಯವನು! ದೇವರಂತ ಮನುಷ್ಯ! ಇಷ್ಟು ಬೇಗ ಸಾಯಬಾರದಿತ್ತು. ಪಾಪ, ಅವನು ಸೀದಾ ಸ್ವರ್ಗಕ್ಕೆ ಹೋಗಲಿ” ಎಂದು ದೇವರಲ್ಲಿ ಪ್ರಾರ್ಥಿಸಿದರು! ಅವರ ಮಾತುಗಳನ್ನು ಕೇಳಿದ ಮಗನು ಆಕಾಶದತ್ತ ನೋಡಿ, ಕೈಮುಗಿದು ಮೌನವಾಗಿ ಹೇಳಿದನು:

“ತಂದೆಯೇ, ನಿಮ್ಮ ಆಸೆ ಇವತ್ತು ನೆರವೇರಿತು.”

ನೀತಿ :

ಜನರ ನಡವಳಿಕೆ ಪರಿಸ್ಥಿತಿಗೆ ಅನುಗುಣವಾಗಿ ಬದಲಾಗುತ್ತವೆ. ಇಂದು ಕೆಟ್ಟವನೆಂದು ಕಾಣಿಸಿದವನು, ನಾಳೆ ಒಳ್ಳೆಯವನೆಂದು ಹೊಗಳಲ್ಪಡಬಹುದು.